

بِسْمِ اللّٰہِ الرَّحْمَنِ الرَّحِیم

# ಮುಹ್ತರಂ ಡಾ॥ ಅಶ್‌ಫಾಖ್ ಅಹ್ಮದ್ ಸಾಹಿಬ್ ಶಹೀದ್, ಮುಹ್ತರಂ ಮೌಲವಿ ಹೆಚ್. ನಾಸಿರುದ್ದೀನ್ ಸಾಹಿಬ್, ಮುಹ್ತರಮ ಸಾಹಿಬ್‌ಝಾದಿ ಅಮತುಲ್ ವಹೀದ್ ಬೇಗಂ ಸಾಹಿಬ ಇವರ ಸದ್ಗುಣಗಳ ಅನುಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ ಫ್ರಾಂಕ್‌ಫರ್ಟ್‌ನಿಂದ 14–04–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

(ಸ್ಥಳೀಯ ಜಮಾಅತ್ ವ್ಯವಸ್ಥೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ ನಂತರ ಹುಝೂರ್ ಹೇಳಿದರು:)

ಇಂದಿನ ಖುತ್‌ಬಕ್ಕಾಗಿ ಮೊದಲು ನಾನು ಬೇರೆ ಒಂದು ವಿಷಯದ ಬಗ್ಗೆ ಪ್ರಸ್ತಾಪಿಸಲು ನಿರ್ಧರಿಸಿದ್ದೆ. ಆದರೆ ಕೆಲವು ದಿವಂಗತರ ಜನಾಝ ನಮಾಝ್ ನಿರ್ವಹಿಸಲಿಕ್ಕಿದ್ದುದರಿಂದ ಅವರಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಪ್ರಸ್ತಾಪಿಸಲಿಕ್ಕಿತ್ತು. ಆದುದರಿಂದ ಇಂದಿನ ಖುತ್‌ಬದಲ್ಲಿ ಅವರ ಬಗ್ಗೆಯೇ ಮಾತನಾಡಲು ಯೋಚಿಸಿದೆ. ಅವರಲ್ಲೊಬ್ಬರು ಶಹೀದ್, ಇನ್ನೊಬ್ಬರು ಒಬ್ಬ ಮುಬಲ್ಲಿಗ್ ಮತ್ತು ಮೂರನೆಯವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೊಮ್ಮಗಳಾಗಿದ್ದಾರೆ. ಈ ಜನರ ಕೆಲವು ಸದ್ಗುಣಗಳು ಹೇಗಿವೆ ಎಂದರೆ ಅವು ಜಮಾಅತಿನ ಪ್ರತಿಯೊಂದು ವಿಭಾಗದವರಿಗೆ ಉತ್ತಮ ಮಾದರಿಯಾಗಿವೆ. ಅವು ನಮ್ಮ ಪೈಕಿ ಬಹುತೇಕ ಜನರಿಗೆ ಅನುಸರಿಸಲು ಯೋಗ್ಯವಾದ ಮಾದರಿಗಳಾಗಿವೆ. ಅನೇಕರಿಗೆ ಅವುಗಳಲ್ಲಿ ನೀತಿ ಪಾಠಗಳಿವೆ. ಆದುದರಿಂದ ದಿವಂಗತರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವುದಕ್ಕೆ ಬದಲಾಗಿ ಅವರ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಿಸುವುದು ಯೋಗ್ಯವೆಂದು ನಾನು ಮನವರಿಕೆ ಮಾಡಿದೆ. ಅವರ ಜೀವಿತದ ಬಗ್ಗೆ ನನ್ನ ಮುಂದೆ ತರಲಾದ ವಿವರಣೆಗಳು ಮತ್ತು ಅವರ ಬಗ್ಗೆ ಸ್ವತಃ ನನಗೆ ತಿಳಿದಿದ್ದ ಮಾಹಿತಿಗಳು ಹೇಗಿವೆ ಎಂದರೆ **ಮನ್ ಖಝಾ ನಹ್‌ಬಹು** ಎಂಬ ಪವಿತ್ರ ಖುರ್‌ಆನ್ ವಚನ ಅವರಿಗೆ ಅನ್ವಯಿಸುವ ರೀತಿಯಲ್ಲಿದೆ. ಅವರು ತಮ್ಮ ಪ್ರತಿಜ್ಞೆಗಳನ್ನು, ತಮ್ಮ ಸಂಕಲ್ಪಗಳನ್ನು ಮತ್ತು ತಮ್ಮ ಇರಾದೆಗಳನ್ನು ಈಡೇರಿಸುವವರಾಗಿದ್ದರು. ಅವರು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತಾ ಜೀವಿಸಿದರು ಮತ್ತು ಅಲ್ಲಾಹನ ಮುಂದೆ ಹಾಜರಾದರು. ಅವರಲ್ಲಿ ಮೊದಲನೆಯದಾಗಿ ನಮ್ಮ ಶಹೀದ್ ಸಹೋದರ ಪ್ರೊಫೆಸರ್ ಡಾಕ್ಟರ್ ಅಶ್‌ಫಾಖ್ ಅಹ್ಮದ್ ಸಾಹೇಬರ ಬಗ್ಗೆ ಪ್ರಸ್ತಾಪಿಸುವೆನು. ಕಳೆದ ವಾರ ಜುಮುಅ ದಿನದಂದು ಅವರನ್ನು ಶಹೀದರನ್ನಾಗಿ ಮಾಡಲಾಯಿತು. ಪ್ರೊಫೆಸರ್ ಡಾಕ್ಟರ್ ರಿಟಾಯರ್ಡ್ ಅಶ್‌ಫಾಖ್ ಅಹ್ಮದ್ ಸಾಹೇಬರು ಲಾಹೋರಿನ ಶೇಖ್ ಸುಲ್ತಾನ್ ಅಹ್ಮದ್ ಸಾಹೇಬರ ಪುತ್ರರಾಗಿದ್ದರು. ಅವರ ಪ್ರಾಯ 68 ಆಗಿತ್ತು. ಕಳೆದ ವಾರ ಜುಮುಅ ನಮಾಝ್‌ಗೋಸ್ಕರ ತಮ್ಮ ಕಾರಿನಲ್ಲಿ ಬೈತುತ್ತೌಹೀದ್‌ಗೆ ಹೋಗುತ್ತಿದ್ದಾಗ ಮೋಟಾರ್ ಸೈಕಲ್ ಸವಾರನಾದ ಅಹ್ಮದಿಯ್ಯತ್ತಿನ ಒಬ್ಬ ಶತ್ರು ಗುಂಡು ಹಾರಿಸಿ ಅವರನ್ನು ಶಹೀದರನ್ನಾಗಿ ಮಾಡಿದನು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

ಶಹೀದರ ಕುಟುಂಬದಲ್ಲಿ ಅಹ್ಮದಿಯ್ಯತ್‌ನ ಪ್ರವೇಶ ಅವರ ಅಜ್ಜ ಮುಕರ್‍ರಮ್ ಶೇಖ್ ಅಬ್ದುಲ್ ಖಾದಿರ್ ಸಾಹೇಬರ ಮುಖಾಂತರವಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲುಧಿಯಾನಕ್ಕೆ ಆಗಮಿಸಿದಾಗ ಅವರು ಬೈಅತ್ ಮಾಡಿದ್ದರು. ಶಹೀದರು ಮೂಸೀ (ವಸಿಯ್ಯತ್ ಮಾಡಿದವರು) ಆಗಿದ್ದರು. ಖಿಲಾಫತ್‌ನೊಂದಿಗೆ ಹೃತ್ಪೂರ್ವಕ ಪ್ರೀತಿ ಅವರಿಗಿತ್ತು. ತಹಜ್ಜುದ್ ನಿರ್ವಹಿಸುವವರೂ ಅತಿಥಿ ಸತ್ಕಾರ ಮಾಡುವವರೂ ಪರೋಪಕಾರಿಯೂ ಆಗಿದ್ದರು. ಹುದ್ದೇದಾರರನ್ನು ಅನುಸರಿಸುವ ಸಾತ್ವಿಕ ನಿಷ್ಠಾವಂತ ವ್ಯಕ್ತಿ ಅವರಾಗಿದ್ದರು. ಜಮಾಅತ್‌ಗೆ ಸೇವೆ ಸಲ್ಲಿಸಲು ಅವರು ಯಾವಾಗಲೂ ಮುಂದೆ ಇರುತ್ತಿದ್ದರು. ಅವರು ಅತ್ಯಂತ ಉನ್ನತ ನೈತಿಕ ಗುಣಗಳನ್ನು ಹೊಂದಿದವರಾಗಿದ್ದರು. ತಬ್ಲೀಗ್ ಬಗ್ಗೆ ಬಹಳ ಆಸಕ್ತಿ ಇತ್ತು. ಉನ್ನತ ಸ್ವಭಾವಗುಣ, ಸ್ನೇಹಭರಿತ ವರ್ತನೆ ಕಾರಣದಿಂದ ತಮ್ಮ ವಿದ್ಯಾರ್ಥಿಗಳಲ್ಲೂ ಸಹಜೀವಿಗಳಾದ ಪ್ರೊಫೆಸರ್‌ಗಳಲ್ಲೂ ಎಲ್ಲರಿಗೂ ಪ್ರಿಯರಾಗಿದ್ದರು. ಅವರು ತಮ್ಮ ಸಂಗಡಿಗರಾದ ಪ್ರೊಫೆಸರ್‌ಗಳನ್ನು ಮನೆಗೆ ಆಮಂತ್ರಿಸಿ ಸತ್ಕಾರ ನೀಡಿ ಜಮಾಅತಿನ ಬಗ್ಗೆ ಪ್ರಭಾವಶಾಲಿ ರೂಪದಲ್ಲಿ ಪರಿಚಯಿಸುತ್ತಿದ್ದರು. ಈ ಕಾರಣದಿಂದ ಅವರಿಗೆ ಕೆಲವು ಸಾರಿ ಬೆದರಿಕೆಗಳು ಸಹ ಬರುತ್ತಿದ್ದವು. ಆದರೆ ಅವರು ಅವುಗಳನ್ನು ನಿರ್ಲಕ್ಷಿಸುತ್ತಿದ್ದರು ಮತ್ತು ಹೇಳುತ್ತಿದ್ದರು– ಇವು ಸಾಮಾನ್ಯ ವಿಷಯಗಳಾಗಿವೆ ಎಂದು. ಬಾಲ್ಯಕಾಲದಿಂದಲೇ ಶಹೀದರು ಜಮಾಅತ್‌ಗೆ ಸೇವೆ ಸಲ್ಲಿಸುವ ಬಗ್ಗೆ ಬಹಳ ಆಸಕ್ತರಾಗಿದ್ದರು. ಅವರಿಗೆ ಜಮಾಅತಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ಭಾಗ್ಯ ಲಭಿಸಿತ್ತು. ಈ ವರ್ಷ ಅಲ್ಲಾಮ ಇಕ್ಬಾಲ್ ಟೌನ್ ಲಾಹೋರಿನ ಇಮಾರತ್ ಅಧೀನದಲ್ಲಿ ಸೆಕ್ರೆಟರಿ ದಅವತ್ ಇಲಲ್ಲಾಹ್ ಆಗಿ ನೇಮಿಸಲ್ಪಟ್ಟಿದ್ದರು. ಅವರು ಬಹಳ ಉತ್ತಮ ರೀತಿಯಲ್ಲಿ ದಅವತ್ ಇಲಲ್ಲಾಹ್ ಕೆಲಸ ಪ್ರಾರಂಭಿಸಿದ್ದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ ಕಾಲದಲ್ಲಿ ಒಂದು ಸ್ವಪ್ನ ಕಂಡಿದ್ದರು. ಅದರ ಕುರಿತು ಅವರು ತನ್ನ ಸಹೋದರನೊಂದಿಗೆ ಹೀಗೆ ಹೇಳಿದ್ದರು: ನಾನು ಸ್ವಪ್ನದಲ್ಲಿ ಕಂಡೆನು, ನಮ್ಮ ಬಡಾವಣೆಯ ಅಹ್ಮದಿಯೇತರರ ಮಸ್‌ಜಿದ್‌ನಿಂದ ಹೀಗೆ ಪ್ರಕಟಣೆ ಮಾಡಲಾಗುತ್ತಿತ್ತು–

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಮೃತರಾದರು ಎಂದು. ನಾನು ನಮ್ಮ ಮನೆಯ ಲೆಟರ್ ಬಾಕ್ಸ್‌ನಲ್ಲಿ ಒಂದು ಚೂರಿ ಇರಿಸಿದುದಾಗಿ ಕಂಡೆನು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ನಿಧನ ಹೊಂದಿದಾಗ ಅದರ ಬಗ್ಗೆ ಎಂ.ಟಿ.ಎ.ನಲ್ಲಿ ನಡೆಸಲಾದ ಪ್ರಕಟಣೆ ಮೂಲಕ ಈ ಸ್ವಪ್ನ ಈಡೇರಿತು. ಚೂರಿ ಕಂಡದ್ದು ಸ್ವತಃ ಅವರ ಶಹಾದತ್ ಬಗ್ಗೆ ಸೂಚನೆಯಾಗಿತ್ತು.

ಶಹೀದರ ಸಹೋದರ ಹೇಳುತ್ತಾರೆ: ನಮ್ಮ ಸಹೋದರ ನಮಗಿಂತ ಮೊದಲು ಶಹೀದರಾಗಿ ನಮ್ಮ ಕುಟುಂಬದ ಹೆಸರನ್ನು ಪ್ರಕಾಶಿಸಿದರು. ನಮ್ಮ ಕುಟುಂಬದ ಪ್ರಥಮ ಶಹೀದರಾಗಿ ನಮಗೆಲ್ಲರಿಗೂ ಮಾದರಿ ಆದರು. ಅಲ್ಲಾಹನು ಮೃತರ ಪದವಿ ಉನ್ನತಗೊಳಿಸಲಿ. ಶಹೀದರಿಗೆ ಆರು ಸಹೋದರರೂ ಒಬ್ಬ ಸಹೋದರಿಯೂ ಇದ್ದಾರೆ. ಅವರೆಲ್ಲರೂ ವಿದೇಶದಲ್ಲಿದ್ದಾರೆ.

ನಾನು ವಿವರಿಸಲಿರುವ ಇನ್ನೊಬ್ಬ ದಿವಂಗತರು ಮುಕರ್ರಮ್ ಎಚ್. ನಾಸಿರುದ್ದೀನ್ ಸಾಹೇಬ್, ಮುಬಲ್ಲಿಗ್ ಇನ್‌ಚಾರ್ಜ್ ಈಸ್ಟ್ ಗೋದಾವರಿ ಭಾರತ. ಇವರು 2017 ಎಪ್ರಿಲ್ ದಿನಾಂಕ 7ರಂದು ಗೋದಾವರಿ ನದಿಯಲ್ಲಿ ಮುಳುಗಿ ತಮ್ಮ 42ನೇ ವಯಸ್ಸಿನಲ್ಲಿ ಮೃತರಾದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ದುರ್ಘಟನೆಯ ದಿನ ಇವರು ಸಿಕಂದರಾಬಾದಿನ ಅಮೀರ್ ಸಾಹೇಬ್ ಮತ್ತು ಜಮಾಅತಿನ ಇತರರೊಂದಿಗೆ ಬಂಗಲ್‌ಪುಡಿ ಜಮಾಅತ್‌ನಲ್ಲಿ ಸುಬ್‌ಹ್ ನಮಾಝ್ ನಿರ್ವಹಿಸಿದ ನಂತರ ನದಿಯ ಸಮೀಪಕ್ಕೆ ಹೋಗಿದ್ದರು. ಅವರಿಗೆ ಚೆನ್ನಾಗಿ ಈಜುವುದು ತಿಳಿದಿತ್ತು. ನದಿಯಲ್ಲಿ ಬೇರೆ ಕೆಲವರೊಂದಿಗೆ ಈಜಾಡುತ್ತಿದ್ದಾಗ ಅಲ್ಲಿ ಅವರು ಕಾಣೆಯಾದರು. ಅನಂತರ ಮೀನುಗಾರರ ಸಹಾಯ ಪಡೆದು ಒಂದು ಗಂಟೆ ಹುಡುಕಿದಾಗ ಅವರ ಮೃತಶರೀರ ನದಿಯ ಬದಿಯಲ್ಲಿ ದೊರಕಿತು. ಅವರ ಪಿತ ಎ. ಶಾಹುಲ್ ಹಮೀದ್, ಕೇರಳದ ಕಾವಶ್ಶೇರಿಯ ಪ್ರಥಮ ಅಹ್ಮದಿ ಆಗಿದ್ದರು. ಅವರ ಮೂಲಕ ಅಲ್ಲಿ ಜಮಾಅತ್ ಸ್ಥಾಪಿತವಾಯಿತು. ಮೃತರ ತಾಯಿ ಚೇಲಕ್ಕರ ಜಮಾಅತಿನ ಪ್ರಾರಂಭಕಾಲದ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. 2000ದಲ್ಲಿ ಖಾದಿಯಾನ್‌ನಿಂದ ವಿದ್ಯಾಭ್ಯಾಸ ಪೂರ್ಣಗೊಳಿಸಿದ ನಂತರ ಆಂಧ್ರ ಮತ್ತು ತೆಲಂಗಾಣದ ವಿವಿಧ ಸ್ಥಳಗಳಲ್ಲಿ ಯಶಸ್ವೀ ಮುಬಲ್ಲಿಗರಾಗಿ ಕೆಲಸ ಮಾಡಿದ್ದರು. ಅವರು ಮೃತರಾಗುವಾಗ ಈಸ್ಟ್ ಗೋದಾವರಿ ವಲಯದ ಇನ್‌ಚಾರ್ಜ್ ಮುಬಲ್ಲಿಗರಾಗಿ ನೇಮಿಸಲ್ಪಟ್ಟಿದ್ದರು. ಅವರ ಪತ್ನಿ ಹೇಳುತ್ತಾರೆ: ಕೆಲವು ಸ್ಥಳಗಳಲ್ಲಿ ಬರೇ ಮಿಶನ್ ಹೌಸ್ ಮಾತ್ರ ಇತ್ತು. ಅಲ್ಲಿ ಪತ್ನಿ ಮತ್ತು ಮಕ್ಕಳ ಜೊತೆ ಸೇರಿ ಜಮಾಅತ್ ನಮಾಝ್ ನಿರ್ವಹಿಸುತ್ತಿದ್ದರು. ಮೃತರಾಗುವ ಒಂದು ದಿವಸ ಮೊದಲು ಸಹ ಹೀಗೆಯೇ ಮಾಡಿದ್ದರು. ಇದರಲ್ಲಿ ಮುರಬ್ಬಿಗಳಿಗೆ ಮತ್ತು ಮುಬಲ್ಲಿಗರಿಗೆ ಪಾಠವಿದೆ. ಜಮಾಅತಿನ ಜನರು ದೂರ ದೂರ ವಾಸಿಸುತ್ತಿದ್ದು ಯಾರೂ ಕೇಂದ್ರಕ್ಕೆ ಬರದಿರುವಾಗ ಸಹ ಮನೆಯವರ ಜೊತೆ ಸೇರಿ ಬಾಜಮಾಅತ್ ನಮಾಝ್ ನಿರ್ವಹಿಸಬೇಕು.

ಮೃತರ ಪತ್ನಿ ಹೇಳುತ್ತಾರೆ: ಕಾಮರೆಡ್ಡಿ ಎಂಬಲ್ಲಿ ಮೃತರನ್ನು ನೇಮಿಸಿದಾಗ ಅಲ್ಲಿ ಕರಪತ್ರಗಳನ್ನು ವಿತರಣೆ ಮಾಡುತ್ತಿದ್ದಾಗ ಅಲ್ಲಿ ಬಹಳ ವಿರೋಧವುಂಟಾಯಿತು. ವಿರೋಧಿಗಳು ಅವರನ್ನು ಹಿಡಿದು ಬಹಳ ಹೊಡೆದರು. ಆದರೆ ಅಲ್ಲಾಹನ ಅನುಗ್ರಹದಿಂದ ಜೀವಕ್ಕೆ ಅಪಾಯವಾಗಲಿಲ್ಲ. ನಾನು ನನ್ನ ಪತಿಯೊಂದಿಗೆ ಹೇಳಿದೆ, ಇಲ್ಲಿ ಬಹಳ ಅಪಾಯವಿದೆ ಕೇರಳಕ್ಕೆ ನಿಮ್ಮನ್ನು ವರ್ಗಾಯಿಸಲು ಅಪೇಕ್ಷೆ ಸಲ್ಲಿಸಿರಿ ಎಂದು. ಆಗ ಅವರು ಹೇಳಿದರು: ನಾನು ಇಲ್ಲಿನ ಜನರ ವಿರೋಧವನ್ನು ಸೂಚಿಸಿ ಕೇಂದ್ರಕ್ಕೆ ಬರೆದರೆ ಬಹುಶಃ ಕೇಂದ್ರ ನನ್ನನ್ನು ಇಲ್ಲಿಂದ ವರ್ಗಾವಣೆ ಮಾಡಬಹುದು. ಆದರೆ ಇಲ್ಲಿ ವಾಸಿಸುವ ಅಹ್ಮದಿಯರನ್ನು ವರ್ಗಾವಣೆ ಮಾಡುವುದು ಎಲ್ಲಿಗೆ? ಅವರ ವಿರುದ್ಧ ವಿರೋಧ ಜಾರಿಯಲ್ಲಿರುವುದಿಲ್ಲವೇ? ಆದುದರಿಂದ ವಿರೋಧಕ್ಕೆ ಭಯಪಟ್ಟು ಇಲ್ಲಿಂದ ಹೋಗುವುದು ಸರಿಯಲ್ಲ. ನಾವು ನಮ್ಮ ವಕ್ಫ್ ಪ್ರತಿಜ್ಞೆ ಈಡೇರಿಸಬೇಕಾಗಿದೆ. ನಾವು ವಕ್ಫ್ ಮಾಡಿ ಇಲ್ಲಿಗೆ ಆಗಮಿಸಿದ್ದೇವೆ. ಇಲ್ಲಿನ ಪರಿಸ್ಥಿತಿಗೆ ಅನುಸರಿಸಿ ನಾವು ಇಲ್ಲಿ ಜೀವಿಸಬೇಕು. ಅವರು ಹೀಗೆ ಸಹ ಹೇಳುತ್ತಿದ್ದರು: ಶಹಾದತ್‌ನ ಭಾಗ್ಯ ದೊರೆತರೆ ಅದಕ್ಕಿಂತ ದೊಡ್ಡ ಬಹುಮಾನ ಬೇರೆ ಏನಿದೆ. ಆದುದರಿಂದ ನಾವು ಇಲ್ಲಿಯೇ ಇರಬೇಕು ಎಂದು ಹೇಳುತ್ತಿದ್ದರು.

ಅವರ ಸರಳ ಜೀವನದ ಕುರಿತು ಮೃತರ ಪತ್ನಿ ಹೀಗೆ ಹೇಳುತ್ತಾರೆ: ಅವರು ಎಂದೂ ಮನೆಗೆ ಫರ್ನಿಚರ್ ಖರೀದಿಸಲಿಲ್ಲ. ಅವರು ಹೇಳುತ್ತಿದ್ದರು: ನಾವು ವಾಕಿಫೇ ಝಿಂದಗೀ ಆಗಿದ್ದೇವೆ. ಜಮಾಅತ್ ಎಲ್ಲಿಗೆ ಹೋಗಬೇಕೆಂದು ಹೇಳುತ್ತದೆಯೋ ಅಲ್ಲಿಗೆ ನಾವು ಹೋಗಬೇಕಾಗಿದೆ. ಆದುದರಿಂದ ಫರ್ನಿಚರ್ ಮತ್ತು ಮನೆಯ ಸಾಮಗ್ರಿಗಳು ವರ್ಗಾವಣೆ ಹೊಂದಿ ಹೋಗುವುದಕ್ಕೆ ತಡೆಯಾಗಬಾರದು. ನಮಗೆ ಜಮಾಅತ್ ನೀಡುವ ಸೌಲಭ್ಯಗಳಿಂದ ನಾವು ತೃಪ್ತರಾಗಬೇಕು ಎಂದು ಹೇಳುತ್ತಿದ್ದರು. ಇದು ಸಹ ಒಬ್ಬ ವಾಕಿಫೆ ಝಿಂದಗಿಗೆ ಒಂದು ಉತ್ತಮ ಅನುಸರಿಸಬಹುದಾದ ಮಾದರಿಯಾಗಿದೆ.

ಕಳೆದ ವರ್ಷ ಅಮಲಪುರಮ್‌ಗೆ ಮೃತರು ವರ್ಗಾಯಿಸಲ್ಪಟ್ಟಾಗ ಅವರು ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಲು ಒಂದು ಕಿಲೋಮೀಟರ್ ನಡೆದು ಅಥವಾ ಸೈಕಲಿನಲ್ಲಿ ಹೋಗಿ ಕಲಿಸುತ್ತಿದ್ದರು. ಇದು ಸಹ ಮುಬಲ್ಲಿಗರಿಗೂ ಮುರಬ್ಬಿಗಳಿಗೂ ಅನುಸರಿಸಲು ಯೋಗ್ಯವಾದ ಉದಾಹರಣೆಯಾಗಿದೆ. ಮೃತರ ಪತ್ನಿ ಹೇಳುತ್ತಾರೆ: ಮಕ್ಕಳ ರಜಾ ಕಾಲದಲ್ಲಿ ನಾನು ಕೇರಳಕ್ಕೆ ಹೋಗುತ್ತಿದ್ದಾಗ ಮೃತರು ಮನೆಯಲ್ಲಿ ಒಬ್ಬರೇ ಇದ್ದಾಗ ಅತಿಥಿಗಳು ಬಂದಾಗ ಅವರು ಗಾಬರಿಗೊಳ್ಳುತ್ತಿರಲಿಲ್ಲ. ಅವರು ಸ್ವತಃ ಅಡಿಗೆ ಮಾಡಿ ಅತಿಥಿಗಳಿಗೆ ಸತ್ಕಾರ ಮಾಡುತ್ತಿದ್ದರು. ಅವರಿಗೆ ಶಹಾದತ್ ಬಗ್ಗೆ ಆಶೆ ಇತ್ತು. ಅವರು ಹೇಳಿದ್ದರು: ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರನ್ನು ಮತ್ತು ನನ್ನ ದಿವಂಗತ ಪಿತರನ್ನು ಸ್ವಪ್ನದಲ್ಲಿ ಪದೇ ಪದೇ ಕಂಡಿದ್ದೇನೆ. ನನ್ನ ಪಿತ ನನ್ನನ್ನು ಕರೆಯುತ್ತಿರುವ ಹಾಗೆ ಕಾಣುತ್ತಿತ್ತು.

ಒಂದು ರೀತಿಯಲ್ಲಿ ಮೃತರು ಶಹಾದತ್ ಗಳಿಸಿದ್ದಾರೆ. ಅವರು ಧಾರ್ಮಿಕ ಸೇವೆಗೋಸ್ಕರ ಹೋಗಿದ್ದರು. ಈ ಧಾರ್ಮಿಕ ಸೇವೆಯ ಕಾಲದಲ್ಲಿಯೇ ಅವರು ಮೃತರಾದರು.

ಇದು ಸಹ ಒಂದು ರೀತಿಯ ಶಹಾದತ್ ಆಗಿದೆ. ಮೃತರು ಬಹಳ ಪ್ರಾರ್ಥನೆ ಮಾಡುವವರೂ ತಹಜ್ಜುದ್ ನಿರ್ವಹಿಸುವವರೂ ಉತ್ತಮ ಸ್ವಭಾವ ಗುಣದವರೂ ಆಗಿದ್ದರು. ತಬ್ಲೀಗ್ ಕ್ಷೇತ್ರದಲ್ಲಿ ಅವರು ನಿರ್ಭಯ ಮುಜಾಹಿದ್ ಆಗಿದ್ದರು. ಹಲವು ಸಾರಿ ಶತ್ರುಗಳು ಅವರನ್ನು ಹಿಡಿದು ಹಾಕಿ ಹೊಡೆದಿದ್ದರು. ನಾನು ಇದರ ಬಗ್ಗೆ ಹಿಂದೆ ನನ್ನ ಒಂದು ಖುತ್‌ಬದಲ್ಲಿ ಮತ್ತು ಜಲ್ಸ ಸಾಲಾನದಲ್ಲಿ, ಮೌಲ್ವಿಗಳು ಹೊಡೆಯುವ ಮತ್ತು ಬಡಿಯುವ ಅಪಾಯಕರ ವಿಧಾನಗಳನ್ನು ವಿವರಿಸುವ ಸಂದರ್ಭದಲ್ಲಿ ಸಹ ಪ್ರಸ್ತಾಪಿಸಿದ್ದೆನು.

ಮೃತರಿಗೆ ವೃದ್ಧೆಯಾದ ತಾಯಿ ಇದ್ದಾರೆ. ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ. ಅವರ ಇಬ್ಬರು ಹಿರಿಯ ಸಹೋದರರಲ್ಲಿ ಒಬ್ಬರು ಪಾಲ್‌ಘಾಟ್ ಜಿಲ್ಲೆಯ ಅಮೀರ್ ಸುಲೈಮಾನ್ ಸಾಹೇಬ್ ಆಗಿದ್ದಾರೆ. ಅವರ ಇನ್ನೊಬ್ಬ ಸಹೋದರ ಎಚ್. ಶಮ್ಸುದ್ದೀನ್ ಸಾಹಿಬ್, ಖಾದಿಯಾನ್‌ನಲ್ಲಿ ನಝ್ರಾರತ್ ನಶ್ರೋ ಇಶಾಅತ್‌ನಲ್ಲಿ ಮಲಯಾಳಂ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

ಮೃತರೊಂದಿಗೆ ಕೆಲಸ ಮಾಡುತ್ತಿದ್ದ ಮುಬಲ್ಲಿಗ್ ನವೀದುಲ್ ಫತ್‌ಹ್ ಶಾಹಿದ್ ಸಾಹೇಬ್ ಹೇಳುತ್ತಾರೆ: ಮೌಲಾನ ನಾಸಿರುದ್ದೀನ್ ಸಾಹೇಬ್ ಅವರು ಅಹ್ಮದಿಯಾ ಜಮಾಅತಿನ ಅಭಿವೃದ್ಧಿಗೋಸ್ಕರ ಪ್ರತಿಯೊಂದು ಕೆಲಸ ಮಾಡಲು ಸಿದ್ಧರಾಗಿರುತ್ತಿದ್ದರು. ಬಹಳ ಸ್ನೇಹಭಾವ ಹೊಂದಿದವರಾಗಿದ್ದರು. ಅವರು ಕರ್ಮಶಾಲಿ ಪಂಡಿತರಾಗಿದ್ದರು. ತಪ್ಪದೆ ತಹಜ್ಜುದ್ ನಿರ್ವಹಿಸುತ್ತಿದ್ದರು. ಪ್ರತಿದಿನ ತಅ್‌ಲೀಮ್ ತರ್‌ಬಿಯ್ಯತ್ ಕೆಲಸ ಮಾಡುತ್ತಿದ್ದರು. ಆಫೀಸಿಗೆ ಸಂಬಂಧಿಸಿದ ಕೆಲಸ ಯಥಾ ಸಮಯ ನಿರ್ವಹಿಸುತ್ತಿದ್ದರು. ಹಿರಿಯರನ್ನು ಗೌರವಿಸುತ್ತಿದ್ದರು. ಕಿರಿಯರೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಅವರು ಪ್ರತಿದಿನ ಹೊರಗೆ ಹೋಗಿ ತಬ್ಲೀಗ್ ಮಾಡುತ್ತಿದ್ದರು. ಅವರಿಗೆ ಭಯವಿರಲಿಲ್ಲ. ಶತ್ರುಗಳು ಏನು ಮಾಡಬಲ್ಲರು ಎಂದು ಹೇಳುತ್ತಿದ್ದರು. ಅವರು ಅಹ್ಮದಿಯೇತರರ ಜೊತೆ ಸಹ ವಿಶಾಲ ಸಂಬಂಧ ಸ್ಥಾಪಿಸಿದ್ದರು. ಅವರನ್ನು ಸಂತೋಷದಿಂದ ಎದುರುಗೊಳ್ಳುತ್ತಿದ್ದರು. ಅವರು ಬಹಳ ಪ್ರಿಯ ವ್ಯಕ್ತಿ ಆಗಿದ್ದರು. ನಾನು ಅವರನ್ನು ಆಯಾಸಗೊಂಡವರಾಗಿ ಎಂದೂ ಕಾಣಲಿಲ್ಲ. ಅವರು ಎಂದೂ ಕೋಪಗೊಳ್ಳುತ್ತಿರಲಿಲ್ಲ. ಅವರು ತಮ್ಮ ಸಂಗಡಿಗರಾದ ಮುಅಲ್ಲಿಮರೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಅವರ ಬಗ್ಗೆ ಲಕ್ಷ್ಯ ನೀಡುತ್ತಿದ್ದರು. ಅವರು ಜನರೊಂದಿಗೆ ಎಂತಹ ಪ್ರೀತಿ ಪ್ರಕಟಿಸುತ್ತಿದ್ದರೆಂದರೆ ಅವರನ್ನು ಕಂಡವರೆಲ್ಲಾ ಅವರಲ್ಲಿ ಒಲವು ಹೊಂದುತ್ತಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ನಿತ್ಯ ಓದುತ್ತಿದ್ದರು. ಇದು ಪ್ರತಿಯೊಬ್ಬ ಮುಬಲ್ಲಿಗ್ ಮತ್ತು ಮುರಬ್ಬಿಗೆ ಅತ್ಯಂತ ಆವಶ್ಯಕವಾದುದಾಗಿದೆ. ಅವರು ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದನ್ನು ಎಂದೂ ನಿರ್ಲಕ್ಷಿಸುತ್ತಿರಲಿಲ್ಲ. ಅವರು ಪ್ರತಿದಿನ ಡೈರಿ ಬರೆಯುತ್ತಿದ್ದರು. ಖಲೀಫರು ಹೇಳುವ ಮಾತನ್ನು ಲಕ್ಷ್ಯವಿಟ್ಟು ಆಲಿಸುತ್ತಿದ್ದರು. ಅವರು ಖುತ್‌ಬಗಳ ಬಗ್ಗೆ ಬಹಳ ಚಿಂತಿಸಿ ಕಾರ್ಯ ಪ್ರವೃತ್ತರಾಗುತ್ತಿದ್ದರು. ಇದು ಸಹ ವಾಕಿಫೀನೆ ಝಿಂದಗಿಗಳು ಮಾಡಬೇಕಾದ ಬಹಳ ಮುಖ್ಯವಾದ ಕೆಲಸವಾಗಿದೆ.

ಅವರು ಖಿಲಾಫತ್ ಬಗ್ಗೆ ಅಪರಿಮಿತ ಪ್ರೀತಿ ಹೊಂದಿದವರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಗ್ಗೆ ಅವರು ಬಹಳ ಪ್ರೀತಿ ಹೊಂದಿದ್ದರು. ವಝೀರ್ ಎಂಬ ಒಬ್ಬ ಮುಅಲ್ಲಿಮ್ ಹೇಳುತ್ತಾರೆ: ಅವರು ನಿತ್ಯ ತಹಜ್ಜುದ್ ನಮಾಝ್ ನಿರ್ವಹಿಸುವವರೂ, ನಮಾಝ್‌ನಲ್ಲಿ ಅತ್ಯಂತ ದೈನ್ಯತೆ ಪ್ರಕಟಿಸುವವರೂ ಪ್ರತಿದಿನ ತಿಲಾವತ್ ಮಾಡುವವರೂ ನಿಷ್ಠಾವಂತ ಕರ್ಮಶಾಲಿಯೂ ಖಿಲಾಫತ್ ಬಗ್ಗೆ ವಿಶಿಷ್ಟ ಪ್ರೀತಿ ಹೊಂದಿದವರೂ ಆಗಿದ್ದರು. ಬಾಜಮಾಅತ್ ನಮಾಝ್ ಬಗ್ಗೆ ಬಹಳ ವಿಶಿಷ್ಟ ಗಮನ ಹರಿಸುವವರಾಗಿದ್ದರು. ಅತಿಥಿ ಸತ್ಕಾರ ಮಾಡುವವರಾಗಿದ್ದರು. ದುಂದು ವೆಚ್ಚ ಮಾಡದವರೂ ಆಗಿದ್ದರು. ಅವರು ಪುಸ್ತಕಗಳನ್ನು ಬಹಳ ಓದುವವರಾಗಿದ್ದರು. ಅವರೊಂದಿಗೆ ಏನಾದರೂ ಪ್ರಶ್ನೆ ಕೇಳಿದರೆ ಅತ್ಯಂತ ಉತ್ತಮವಾದ ರೀತಿಯಲ್ಲಿ ಉತ್ತರ ನೀಡುತ್ತಿದ್ದರು. ವಿವಿಧ ಕಾರ್ಯಕ್ರಮಗಳಲ್ಲಿ, ಜನರ ಜೊತೆ ಕುಳಿತಿರುವಾಗ ಮತ್ತು ಪ್ರಯಾಣ ಕಾಲದಲ್ಲಿ ಜಮಾಅತಿನ ಬಗ್ಗೆ ವಿಶ್ವಾಸವರ್ಧಕ ಘಟನೆಗಳನ್ನು ವಿವರಿಸುತ್ತಿದ್ದರು. ಪ್ರತಿಯೊಬ್ಬರೊಂದಿಗೆ ಶ್ರೇಷ್ಠ ಸ್ವಭಾವ ಗುಣದೊಂದಿಗೆ ವರ್ತಿಸುತ್ತಿದ್ದರು. ಆದುದರಿಂದ ಪ್ರತಿಯೊಬ್ಬರು ಅವರ ಜೊತೆ ಇರಲು ಇಷ್ಟಪಡುತ್ತಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಪತ್ನಿ ಮತ್ತು ಮಕ್ಕಳಿಗೆ ಸಹನೆ ನೀಡುವವನಾಗಲಿ.

ನಾನು ಪ್ರಸ್ತಾಪಿಸಲಿರುವ ಮೂರನೆಯವರು, ಮುಹ್ತರಮ ಸಾಹಿಬ್‌ಝಾದಿ ಅಮತುಲ್ ವಹೀದ್ ಬೇಗಮ್ ಸಾಹಿಬ ಆಗಿದ್ದಾರೆ. ಸಾಹಿಬ್ ಝಾದ ಮಿರ್ಝಾ ಖುರ್‌ಶಿದ್ ಅಹ್ಮದ್ ಸಾಹೇಬರ ಪತ್ನಿಯಾದ ಅವರು 2017 ಎಪ್ರಿಲ್ ದಿನಾಂಕ 10ರಂದು ಅಂದಾಜು 82 ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹೇಬರ ಅತ್ಯಂತ ಕಿರಿಯ ಪುತ್ರಿಯಾಗಿದ್ದರು. ಅವರು ನನ್ನ ಪಿತೃ ಸಹೋದರಿ ಕೂಡ ಆಗಿದ್ದಾರೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೊಮ್ಮಗಳೂ ಆಗಿದ್ದರು. ಬಿಹಿಶ್ತಿ ಮಖ್‌ಬರ ರಬ್ವದಲ್ಲಿ ಅವರನ್ನು ದಫನ ಮಾಡಲಾಯಿತು. ಅವರ ನಿಕಾಹ್ ಖುತ್‌ಬ 1955 ಡಿಸಂಬರ್ ದಿನಾಂಕ 26ರಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರು ನಿರ್ವಹಿಸಿದ್ದರು. ಅವರಿಗೆ ಆರು ಗಂಡು ಮಕ್ಕಳನ್ನು ಅಲ್ಲಾಹನು ದಯಪಾಲಿಸಿದನು. ಅವರಲ್ಲಿ ನಾಲ್ವರು ವಾಕಿಫೇ ಝಿಂದಗಿ ಆಗಿದ್ದಾರೆ. ಅವರಲ್ಲಿ ಇಬ್ಬರು ಡಾಕ್ಟರ್‌ಗಳು ಫಝ್ಲೆ ಉಮರ್ ಆಸ್ಪತ್ರೆ ರಬ್ವದಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತೊಬ್ಬರು ಪಿ.ಎಚ್‌ಡಿ. ಡಾಕ್ಟರ್ ಬಿರುದು ಪಡೆದಿದ್ದು ನಝ್ರಾರತ್ ತಅ್‌ಲೀಮ್‌ನಲ್ಲಿ ಕಾರ್ಯ ನಿರತರಾಗಿದ್ದಾರೆ. ಇನ್ನೊಬ್ಬರು ವಕೀಲರಾಗಿದ್ದು ಸದರ್ ಅಂಜುಮನ್ ಅಹ್ಮದಿಯಾದ ಕಾನೂನು ಸಲಹೆಗಾರರ ಕಚೇರಿಯಲ್ಲಿದ್ದಾರೆ.

ಮೃತರು 29 ವರ್ಷ ಕಾಲ ಲಜ್‌ನದಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಸೆಕ್ರೆಟರಿ ಸಿನ್‌ಅತೋ ತಿಜಾರತ್ ಮತ್ತು ನಾಯಿಬ್ ಸದರ್ ಅವ್ವಲ್ ಆಗಿ ಕೆಲಸ ಮಾಡಿದ್ದಾರೆ. ಅವರು ತನ್ನ ಮೇಲಧಿಕಾರಿಗಳನ್ನು ಅವರೊಂದಿಗೆ ಹೊಂದಿದ್ದ ಸಂಬಂಧವನ್ನಾಗಲೀ ಪ್ರಾಯವನ್ನಾಗಲೀ ಪರಿಗಣಿಸದೆ ಅನುಸರಿಸುವವರಾಗಿದ್ದರು. ನನ್ನ ಪತ್ನಿ ಹೇಳುತ್ತಾರೆ: ನಾನು ಎರಡು ವರ್ಷಗಳ ಕಾಲ ರಬ್ವದ ಸದರ್ ಲಜ್‌ನ ಆಗಿದ್ದಾಗ ಸೆಕ್ರೆಟರಿ ಮತ್ತು ನಾಯಿಬ್ ಸದರ್ ಆಗಿದ್ದ ಅವರ ಜೊತೆ ಕೆಲಸ ಮಾಡುತ್ತಿದ್ದೆ. ಅವರು ಬಹಳ ವಿನಯದಿಂದ ಬಹಳ ಅನುಸರಣೆ ಮನೋಭಾವದಿಂದ ಸಂತೋಷದಿಂದ ಅವರಿಗೆ ವಹಿಸಿಕೊಟ್ಟ ಕೆಲಸ ಮಾಡುತ್ತಿದ್ದರು.

ಅವರ ಪತಿ ಮುಕರ್ರಮ್ ಮಿರ್ಝಾ ಖುರ್‌ಶಿದ್ ಅಹ್ಮದ್ ಸಾಹೇಬರು ಹೇಳುತ್ತಾರೆ: ನನ್ನ ಪತ್ನಿ ಒಬ್ಬ ವಾಕಿಫೇ ಝಿಂದಗಿಯ ಪತ್ನಿಯಾಗಿರುವ ಸ್ಥಿತಿ ಪ್ರಕಾರ ವರ್ತಿಸುತ್ತಿದ್ದರು. ಅವರು ನನ್ನೊಂದಿಗೆ ಏನನ್ನೂ ಆವಶ್ಯಪಡಲಿಲ್ಲ. ಅವರು ಮಕ್ಕಳ ತರಬೇತಿ ಕಡೆಗೆ ಲಕ್ಷ್ಯ ನೀಡಿದರು. ಇದೇ ಕಾರಣದಿಂದ ಅಲ್ಲಾಹನ ಅನುಗ್ರಹದಿಂದ ಆರು ಮಕ್ಕಳಲ್ಲಿ ನಾಲ್ವರು ವಾಕಿಫೇ ಝಿಂದಗಿ ಆಗಿರುವರು. ಅವರು ತಮ್ಮ ಮಕ್ಕಳನ್ನು ಮಾತ್ರವಲ್ಲ ತಮ್ಮ ಸೇವಕರ ಮಕ್ಕಳ ಬಗ್ಗೆ ಸಹ ಉತ್ತಮ ರೀತಿಯಲ್ಲಿ ನೋಡಿಕೊಂಡರು. ಪವಿತ್ರ ಖುರ್‌ಆನ್ ಕಲಿಯದ ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿದರು.

ಅವರ ಪತಿಯ ಒಬ್ಬ ಸಹೋದರಿ ನನ್ನ ಭಾಬಿ ಸಹ ಆಗಿದ್ದಾರೆ; ಅವರು ಬರೆಯುತ್ತಾರೆ: ಅವರು ನಮ್ಮೊಂದಿಗೆ ಹೊಂದಿದ್ದ ಸಂಬಂಧ ಒಬ್ಬ ತಾಯಿ ತನ್ನ ಹೆಣ್ಣು ಮಕ್ಕಳೊಂದಿಗೆ ಹೊಂದಿರುವ ಸಂಬಂಧದ ಹಾಗಿತ್ತು. ನಮ್ಮ ತಾಯಿ ನಿಧನ ಹೊಂದಿದ ನಂತರ ಅವರು ನಮ್ಮ ಬಗ್ಗೆ ಬಹಳ ಶ್ರದ್ಧೆ ವಹಿಸಿದರು. ಅವರು ಅನೇಕ ಹೆಣ್ಣು ಮಕ್ಕಳನ್ನು ತಮ್ಮ ಮನೆಯಲ್ಲಿ ಸಾಕಿದರು. ಅವರ ಲೌಕಿಕ ಮತ್ತು ಧಾರ್ಮಿಕ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿದರು. ಅವರ ಪತಿಯ ಅತ್ಯಂತ ಚಿಕ್ಕ ಸಹೋದರಿ ಬರೆಯುತ್ತಾರೆ: ನಾನು ಒಮ್ಮೆ ಅವರೊಂದಿಗೆ ಕೇಳಿದೆ: ನೀವು ಎಷ್ಟು ವರ್ಷ ಪ್ರಾಯದಿಂದ ತಹಜ್ಜುದ್ ನಮಾಝ್ ಮಾಡಲು ಪ್ರಾರಂಭಿಸಿದಿರಿ ಎಂದು. ಅವರು ಹೇಳಿದರು: ನಾನು ನನ್ನ ಹನ್ನೆರಡನೆಯ ವರ್ಷ ಪ್ರಾಯದಿಂದ ಕ್ರಮಬದ್ಧವಾಗಿ ತಹಜ್ಜುದ್ ನಮಾಝ್ ಅನುಷ್ಠಿಸುತ್ತಿದ್ದೇನೆ. ಅವರಿಗೆ ಆರು ಸೊಸೆಯಂದಿರಿದ್ದರು. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಬ್ಬರೊಂದಿಗೆ ಅತ್ಯುತ್ತಮ ಸಂಬಂಧವಿತ್ತು. ಅವರನ್ನು ತಮ್ಮ ಸ್ವಂತ ಮಕ್ಕಳ ಹಾಗೆ ನೋಡಿಕೊಂಡರು.

ನನ್ನ ಚಿಕ್ಕ ಸಹೋದರಿ ಅಮತುಲ್ ಖುದ್ದೂಸ್ ಸಾಹೇಬ ಬರೆಯುತ್ತಾರೆ: ಮನುಷ್ಯನ ಕರ್ಮಗಳಲ್ಲಿ ಹೆಚ್ಚು ಕಮ್ಮಿ ಆಗುತ್ತಾ ಇರುತ್ತದೆ. ಆದರೆ ಅವರ ಸ್ಥಿತಿ ಹೇಗಿತ್ತೆಂದರೆ ಪವಿತ್ರ ಖುರ್‌ಆನ್ ಮತ್ತು ಹದೀಸ್‌ನೊಂದಿಗೆ ಅವರಿಗೆ ನಿಕಟ ಸಂಬಂಧವಿತ್ತು. ಒಳ್ಳೆಯತನ ಅವರ ಸ್ವಭಾವದಲ್ಲಿ ಲೀನವಾಗಿತ್ತು. ನಮ್ಮ ಸಂಪ್ರದಾಯಗಳಿಗೆ ಮತ್ತು ತತ್ವಗಳಿಗೆ ವಿರುದ್ಧವಾಗಿ ಏನನ್ನಾದರೂ ಕಂಡರೆ ಅವರು ಬಹಿರಂಗವಾಗಿ ಅದರ ವಿರುದ್ಧ ಮಾತನಾಡುತ್ತಿದ್ದರು.

ಅವರ ಪುತ್ರ ಬರೆಯುತ್ತಾರೆ: ಖಲೀಫರಾಗುವ ಮುಂಚೆ ನಿಮ್ಮೊಂದಿಗಿದ್ದ ಸಂಬಂಧವೇ ಬೇರೆ ಆಗಿತ್ತು. ಈಗ ಸಹೋದರ ಪುತ್ರನೆಂಬ ಸಂಬಂಧ ಕೊನೆಗೊಂಡಿದೆ, ಕೇವಲ ಖಿಲಾಫತ್ ಸಂಬಂಧ ಮಾತ್ರ ಬಾಕಿಯಾಗಿದೆ ಎಂದು ತಾಯಿ ಹೇಳುತ್ತಿದ್ದರು.

ಅವರು ಬರೆಯುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ನಿಧನ ಹೊಂದಿದ ಸಮಾಚಾರ ಬಂದಾಗ ನಾವು ನಮಾಝ್‌ಗೆ ಮಸ್‌ಜಿದ್‌ಗೆ ಹೋಗಿದ್ದೆವು. ಆಗ ನಮ್ಮ ತಾಯಿ ಬಹಳ ದುಃಖದಿಂದಿದ್ದರು. ಆಗ ನನ್ನ ದೊಡ್ಡ ಭಾಭಿ ಧ್ವನಿಯೆತ್ತಿ ಅಳಲು ಪ್ರಾರಂಭಿಸಿದಾಗ ತಾಯಿ ಹೇಳಿದರು: ಮೌನವಾಗಿರು ಇದು ಜಮಾಅತಿಗೆ ಪರೀಕ್ಷೆಯ ಕಾಲವಾಗಿದೆ. ಇದು ದುಆ ಮಾಡಬೇಕಾದ ಕಾಲವಾಗಿದೆ. ಈಗ ಬಹಳ ಪ್ರಾರ್ಥಿಸು ಎಂದು ಹೇಳಿದರು.

ಹಾಲೂಡಿಕೆ ಮೂಲಕದ ಸಂಬಂಧದ ಬಗ್ಗೆ ಸಹ ಅವರು ಬಹಳ ಶ್ರದ್ಧೆ ವಹಿಸಿದ್ದರು. ಅವರಲ್ಲಿ ಅನೇಕ ಸದ್ಗುಣಗಳು ಇದ್ದುವು. ಅವರ ಮಕ್ಕಳಲ್ಲಿ ಸಹ ಅಲ್ಲಾಹನು ಈ ಸದ್ಗುಣಗಳನ್ನು ಜಾರಿಗೊಳಿಸಲಿ. ಅವರಿಗೆ ಖಿಲಾಫತ್‌ನೊಂದಿಗೆ ನಿಷ್ಠಾವಂತ ಸಂಬಂಧ ಸ್ಥಾಪಿಸುವಂತೆ ಮಾಡಲಿ. ಅಲ್ಲಾಹನು ಮೃತರ ಪದವಿಗಳನ್ನು ಉನ್ನತ ಗೊಳಿಸಲಿ – ಆಮೀನ್.

(ಜುಮುಅ ನಮಾಝ್ ನಿರ್ವಹಿಸಿದ ನಂತರ ಹುಝೂರ್ ಈ ಮೂವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸಿದರು.)

*****

***Friday Sermon delivered by Hadrath Khaleefatul Masih Al Khamis(atba)***

*At, Frankfurt, Germany on 14-04-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon